ಶ್ರೀ ಎಚ್. ಎಂ. ಚನ್ನಬಸಪ್ಪ.—ನಾನು ಈಗಾಗಲೆ ಆಜ್ಞೆ ಮಾಡಿದ್ದೇನೆ.

RIVERS IN CATCHMENT AREA OF KALI PROJECT

659. SRI S. BANGARAPPA (Shirab).—Will the Minister for Public Works and Electricity be pleased to state.—

The number of rivers that flow withen the catchment area of the Kali Project and the total miles of such flow ?

SRI H. M. CHANNABASAPPA.—Minister for Public Works and Electricity.—

Nine tributaries of the Kalinadi flow within its catchment area and their total length is 200 miles.

ಶ್ರೀ ಎಸ್. ಬಂಗಾರಪ್ಪ.—ಕಾಳಿ ನದಿ ಕ್ಯಾಚ್‌ಮೆಂಟ್ ಏರಿಯಾದಲ್ಲಿ ೯ ನದಿಗಳು ಹರಿಯುತ್ತವೆಯೆಂದೂ ಮತ್ತು ಆ ನದಿಗಳೆಲ್ಲಾ ನಮ್ಮ ಕರ್ನಾಟಕದ ಗಡಿಯೊಳಗೆ ಸುಮಾರು ೨೦೦ ಮೈಲಿ ದೂರ ಹರಿಯುತ್ತವೆಂದೂ ಹೇಳಿದೆ. ಆ ನದಿಗಳು ಯಾವುವು ಮತ್ತು ಎಷ್ಟೆಷ್ಟು ಮೈಲಿ ನಮ್ಮ ಗಡಿಯಲ್ಲಿ ಹರಿಯುತ್ತವೆ. ?

† ಶ್ರೀ ಎಚ್. ಎಂ. ಚನ್ನಬಸಪ್ಪ.—ಎಡದಂಡೆಗೆ ಸಂಬಂಧಪಟ್ಟಂತೆ.

ಪಂಡ್ರಿ ನದಿ—೪೦ ಮೈಲಿ, ಬೆಚ್ಚಿನಾಲ ೨೮ ಮೈಲಿ ; ತಟ್ಟಿ ಹಳ್ಳ ೫೦ ಮೈಲಿ ; ಬಗಿನಿಕಟ್ಟೆ ಹಳ್ಳ ೧೨ ಮೈಲಿ ಬಲದಂಡೆಗೆ ಸಂಬಂಧಪಟ್ಟಂತೆ.—ನಾಸಿನಾಲ ಆರುವರೆ ಮೈಲಿ ; ನಾಗಿನಾಲ ೧೨ ಮೈಲಿ ; ಕನೇರಿ ೬೨ ಮೈಲಿ ; ವಾಕಿನಾಲ ೧೯ ಮೈಲಿ : ಮತ್ತು ತಾನನಾಲ ಹನ್ನೊಂದೂವರೆ ಮೈಲಿ ;—ಹೀಗೆ ಒಟ್ಟು ೨೦೦ ಮೈಲಿ ನಮ್ಮ ಗಡಿಯಲ್ಲಿ ಹರಿಯುತ್ತವೆ

ಶ್ರೀ ಎಸ್. ಬಂಗಾರಪ್ಪ.—ನಾವು ಮಹಾಜನ್ ವರದಿಯನ್ನು ಒಪ್ಪಿದರೆ ಈ ನದಿಗಳಲ್ಲಿ ಕೆಲ ಮಹಾರಾಷ್ಟ್ರಕ್ಕೆ ಹೊಂಗುತ್ತವೆಂಬುದು ನಿಜವೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಕೆಲವು ನದಿಗಳ ಭಾಗ ಮಹಾರಾಷ್ಟ್ರಕ್ಕೆ ಹೋಗುತ್ತವೆ. ಅದ ಎಷ್ಟೆಷ್ಟು ಮೈಲಿ ಹೋಗುತ್ತದೆ ಎಂಬ ವಿವರಗಳು ಸಧ್ಯಕ್ಕೆ ನನ್ನಲ್ಲಿಲ್ಲ.

ಶ್ರೀ ಎಸ್. ಬಂಗಾರಪ್ಪ.—ಸುಮಾರು ಎಷ್ಟಾಗಬಹುದು ?

ಶ್ರೀ ಎಚ್. ಎಂ ಚನ್ನಬಸಪ್ಪ.—ಈಗಲೇ ತಿಳಿಸುವುದಕ್ಕೆ ಸಾಧ್ಯವಿಲ್ಲ. ವೇಳೆ ಕೊಟ್ಟರೆ ಅದನ್ನು ತಿಳಿಸಬಹುದು.

(QUESTION FOR ANSWERS ON THE DAY BUT NOT TAKEN UP

ESTABLISHMENT OF HEALTH CENTRES IN GADAG TALUK

862. SRI K. H. KURADGI (Mundargi).—

Will the Minister for Health be pleased to state —

(*a*) the number of health centres the Government proposes to establish in Gadag Taluk this year ;

(*b*) whether such centres will be established at Kotumachigi and Thimmapur villages ?